


بسم اللہِ الرَّحمٰنِ الرَّحیم

# ಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20-12-2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಯುದ್ಧಗಳು ಮತ್ತು ಕಾರ್ಯಾಚರಣೆಗಳ ಘಟನೆಗಳಿಗೆ ಸಂಬಂಧಪಟ್ಟು ಹಝ್ರತ್ ಪೈಗಂಬರ್(ಸ)ರ ಜೀವಿತದ ಮಗ್ಗುಲುಗಳನ್ನು ವಿವರಿಸಲಾಗುತ್ತಿತ್ತು. ಈ ಸಂಬಂಧವಾಗಿ ಉಕಾಶ ಬಿನ್ ಮುಹ್‌ಸಿನ್‌ರ ಕಾರ್ಯಾಚರಣೆಯ ಬಗ್ಗೆಯೂ ಪ್ರಸ್ತಾಪವಿದೆ. ಈ ಕಾರ್ಯಾಚರಣೆ ಗ಼ಮರ್ ಮರ್‌ಝೂಖ್‌ನ ಕಡೆಗೆ ಹಿಜರೀ 6, ರಬೀಉಲ್ ಅವ್ವಲ್ ಮಾಸದಲ್ಲಿ ನಡೆದಿತ್ತು. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ತನ್ನ ಒಬ್ಬ ಮುಹಾಜಿರ್ ಸಹಾಬಿಯಾದ ಉಖಾಶ ಬಿನ್ ಮುಹ್‌ಸಿನ್(ರ)ರನ್ನು ನಲ್ವತ್ತು ಮುಸ್ಲಿಮರ ಒಂದು ತಂಡಕ್ಕೆ ಅಧಿಕಾರಿಯನ್ನಾಗಿ ನಿಯಮಿಸಿ ಬನೂ ಅಸದ್ ಗೋತ್ರದ ಕಡೆಗೆ ಯುದ್ಧಕ್ಕಾಗಿ ಕಳುಹಿಸಿದರು. ಆದರೆ ಮುಸ್ಲಿಮರ ಆಗಮನದ ಬಗ್ಗೆ ಗೊತ್ತಾಗಿ ಆ ಜನರು ಸುತ್ತಮುತ್ತಲಿನ ಪ್ರದೇಶಗಳಿಗೆ ಚದುರಿಹೋದರು.

ಅದೇ ರೀತಿಯಲ್ಲಿ ಮತ್ತೊಂದು ಕಾರ್ಯಾಚರಣೆ, ಹತ್ತು ವ್ಯಕ್ತಿಗಳ ಒಂದು ತಂಡವನ್ನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ)ರ ನಾಯಕತ್ವದಲ್ಲಿ ಹಿಜರೀ 6, ರಬೀಉಸ್ಸಾನಿ ತಿಂಗಳಲ್ಲಿ ಬನೂ ಸಅ್‌ಲಬ ಮತ್ತು ಇತರ ಗೋತ್ರಗಳ ಕಡೆಗೆ ಕಳುಹಿಸಲಾಯಿತು. ಈ ಸಂಘ ಅಲ್ಲಿಗೆ ತಲುಪಿದಾಗ ಶತ್ರುಗಳ ನೂರು ಜನರು ಅವರನ್ನು ಸುತ್ತುವರೆದರು ಹಾಗೂ ಈಟಿಗಳು ಮತ್ತು ಬಾಣಗಳ ಮೂಲಕ ಅವರ ಮೇಲೆ ಹಲ್ಲೆ ನಡೆಸಿ ಎಲ್ಲರನ್ನೂ ಶಹೀದ್ ಮಾಡಿದರು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ತೀವ್ರ ಗಾಯಗೊಂಡ ಸ್ಥಿತಿಯಲ್ಲಿ ಬಿದ್ದುಬಿಟ್ಟರು. ಶತ್ರುಗಳು ಅವರ ಬಟ್ಟೆಯನ್ನು ಕಳಚಿ ಅಲ್ಲೇ ಬಿಟ್ಟು ಹೋದರು. ಅದರ ಬದಿಯಿಂದ ದಾಟಿ ಹೋಗುತ್ತಿದ್ದ ಒಬ್ಬ ಮುಸ್ಲಿಮನು ಶಹೀದ್ ಆದವರನ್ನು ಕಂಡು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿಕೊಂಡನು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ಅದನ್ನು ಆಲಿಸಿದಾಗ ಅವರ ದೇಹದಲ್ಲಿ ಚಲನೆ ಉಂಟಾಯಿತು. ಆ ಮುಸ್ಲಿಮನು ಅವರಿಗೆ ಆಹಾರ ನೀಡಿ ಅವರನ್ನು ಸವಾರಿಮೃಗದ ಮೇಲೆ ಕುಳ್ಳಿರಿಸಿ ಮದೀನಕ್ಕೆ ತಲಪಿಸಿದನು.

ಮುಹಮ್ಮದ್ ಬಿನ್ ಮಸ್ಲಮ(ರ)ರ ಜೊತೆಗಾರರು ಹುತಾತ್ಮರಾಗಲು ಹೊಣೆಗಾರರಾದ ವಿರೋಧಿಗಳ ಮೇಲೆ ಪ್ರತೀಕಾರ ಮಾಡಲಿಕ್ಕಾಗಿ ಒಂದು ಕಾರ್ಯಾಚರಣೆಯ ಪ್ರಸ್ತಾಪ ಲಭಿಸುತ್ತದೆ. ಈ ಕಾರ್ಯಾಚರಣೆಯನ್ನು ಸರಿಯ ಹಝ್ರತ್ ಅಬೂಉಬೈದ ಬಿನ್ ಅಲ್‌ಜರಾಹ್ ಎಂದು ಕರೆಯಲಾಗುತ್ತದೆ. ಇದರ ವಿವರಣೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆಯುತ್ತಾರೆ: ಮುಹಮ್ಮದ್ ಬಿನ್ ಮಸ್ಲಮ(ರ)ರ ಸಂಗಡಿಗರು ಹುತಾತ್ಮರಾದ ಸುದ್ದಿಯ ಜೊತೆಗೆ ಬನೂ ಸಅ್‌ಲಬ ಗೋತ್ರ ಮದೀನದ ಸುತ್ತಮುತ್ತ ಪ್ರದೇಶಗಳಲ್ಲಿ ದಾಳಿ ನಡೆಸಲು ಉದ್ದೇಶಿಸಿದೆ ಎಂಬ ಮಾಹಿತಿ ಸಹ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಉಬೈದ ಬಿನ್ ಅಲ್‌ಜರ್ರಾಹ್‌ರ ನಾಯಕತ್ವದಲ್ಲಿ ನಲ್ವತ್ತು ಸನ್ನದ್ಧ ಸಹಾಬಿಯರನ್ನು ಕಳುಹಿಸಿದರು. ರಾತ್ರಿ ಸಮಯದಲ್ಲಿ ಯಾತ್ರೆ ಮಾಡಿಕೊಂಡು ಮುಂಜಾನೆ ಅಲ್ಲಿಗೆ ತಲುಪಲು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದರು. ಈ ನಿರ್ದೇಶನವನ್ನು ಪಾಲಿಸುತ್ತಾ ಬೆಳಿಗ್ಗಿನ ಸಮಯದಲ್ಲಿ ಅವರು ಶತ್ರುಗಳನ್ನು ಸುತ್ತುವರೆದರು. ಶತ್ರುಗಳು ಸ್ವಲ್ಪ ಸಮಯ ಹೋರಾಡಿದ ನಂತರ ಪರಾರಿಯಾದರು. ಅಬೂಉಬೈದ(ರ) ಯುದ್ಧ ಸಂಪತ್ತನ್ನು ವಶಪಡಿಸಿಕೊಂಡು ಮದೀನಕ್ಕೆ ಮರಳಿದರು.

ಈ ಕಾರ್ಯಾಚರಣೆಯಲ್ಲಿ ಪ್ರಸ್ತಾಪಿಸಲಾದ ಮುಹಮ್ಮದ್ ಬಿನ್ ಮಸ್ಲಮ(ರ) ಮತ್ತು ಅಬೂಉಬೈದ ಬಿನ್ ಜರ್ರಾಹ್(ರ) ಶ್ರೇಷ್ಠ ಸಹಾಬಿಗಳಾಗಿದ್ದರು. ಮುಹಮ್ಮದ್ ಬಿನ್ ಮಸ್ಲಮ(ರ) ಅನೇಕ ವೈಯಕ್ತಿಕ ಸ್ವಭಾವಗುಣಗಳು ಮತ್ತು ಯೋಗ್ಯತೆಯನ್ನು ಹೊಂದಿದ್ದರು. ಅದರ ಜೊತೆಗೆ ಅವರು ಕಅ್‌ಬ್ ಬಿನ್ ಅಶ್ರಫ್ ಯಹೂದಿಯ ವಧೆಯ ನಾಯಕನಾಗಿದ್ದರು. ಆ ಪಿತೂರಿಗಾರ ಅವರ ಕೈಗಳಿಂದಲೇ ತನ್ನ ಅಂತ್ಯಕ್ಕೆ ತಲುಪಿದ್ದನು. ಮುಹಮ್ಮದ್ ಬಿನ್ ಮಸ್ಲಮ(ರ) ಅನ್ಸಾರಿನ ಔಸ್ ಗೋತ್ರದವರಾಗಿದ್ದರು. ಅವರು ಎರಡನೇ ಖಿಲಾಫತ್ ಕಾಲದಲ್ಲಿ ಹಝ್ರತ್ ಉಮರ್(ರ)ರ ವಿಶಿಷ್ಟ ಕಾರ್ಯದರ್ಶಿಯಾಗಿದ್ದರು. ಹಝ್ರತ್ ಉಮರ್(ರ) ಸಾಮಾನ್ಯವಾಗಿ ತನ್ನ ಕಾರ್ಯನಿರ್ವಾಹಕರ ಕುರಿತು ಇರುವ ದೂರುಗಳ ತನಿಖೆ ನಡೆಸಲು ಅವರನ್ನೇ ಕಳುಹಿಸುತ್ತಿದ್ದರು. ಹಝ್ರತ್ ಉಸ್ಮಾನ್(ರ)ರ ನಿಧನದ ನಂತರ ಮುಸ್ಲಿಮರಲ್ಲಿ ಆಂತರಿಕ ಪಿತೂರಿಗಳ ಬಾಗಿಲು ತೆರೆದಾಗ ಮುಹಮ್ಮದ್ ಬಿನ್ ಮಸ್ಲಮ(ರ) ತನ್ನ ಖಡ್ಗವನ್ನು ಒಂದು ಕಲ್ಲಿಗೆ ಬಡಿದು ತುಂಡುಮಾಡಿದರು ಮತ್ತು ತನ್ನ ಕೈಯಲ್ಲಿ ಒಂದು ಬೆತ್ತವನ್ನು ಮಾತ್ರ ಹಿಡಿಯಲು ತೊಡಗಿದರು. ಯಾರೋ ಅದರ ಕಾರಣವನ್ನು ಕೇಳಿದಾಗ ಅವರು ಹೀಗೆ ಹೇಳಿದರು: 'ಮುಸ್ಲಿಮರ ನಡುವೆ ಆಂತರಿಕ ರಕ್ತಪಾತದ ಬಾಗಿಲು ತೆರೆದರೆ ನೀನು ಖಡ್ಗವನ್ನು ಮುರಿಯಬೇಕು ಮತ್ತು ಯಾವ ರೀತಿಯಲ್ಲಿ ಕೊಠಡಿಯ ನೆಲ ಅಚಂಚಲವಾಗಿ ಅಲ್ಲೇ ಇರುತ್ತದೋ ಅದೇ ರೀತಿಯಲ್ಲಿ ನೀನು ಮನೆಯಲ್ಲಿ ಕುಳಿತುಕೊಳ್ಳಬೇಕು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಆಲಿಸಿದ್ದೇನೆ.' ಇದು ಬಹುಶಃ ಮುಹಮ್ಮದ್

ಬಿನ್ ಮಸ್ಲಮ(ರ)ರಿಗೆ ಅಥವಾ ಈ ಪಿತೂರಿಗಾಗಿ ಮಾತ್ರವಿರುವ ಆದೇಶವಾಗಿರಬಹುದು. ಏಕೆಂದರೆ ಕೆಲವೊಮ್ಮೆ ಆಂತರಿಕ ಪಿತೂರಿಗಳ ವಿರುದ್ಧ ಎದ್ದು ನಿಲ್ಲುವುದು ಕೂಡ ಒಂದು ಉನ್ನತ ಧಾರ್ಮಿಕ ಸೇವೆಯಾಗಿರುತ್ತದೆ.

ಎರಡನೇ ಸಹಾಬಿ ಅಬೂ ಉಬೈದ ಬಿನ್ ಅಲ್‌ಜರ್ರಾಹ್(ರ) ಶ್ರೇಷ್ಠ ಸಹಾಬಿಯರಾಗಿದ್ದರು ಮತ್ತು ಖುರೈಶಿ ವಂಶಜರಾಗಿದ್ದರು. ಹಝ್ರತ್ ಪೈಗಂಬರ್(ಸ) ಅವರಿಗೆ **ಅಮೀನುಲ್ ಮಿಲ್ಲತ್** ಎಂಬ ಬಿರುದನ್ನು ನೀಡಿದ್ದರು. ಇದರಿಂದ ಅವರ ಉನ್ನತ ಸ್ಥಾನದ ಬಗ್ಗೆ ಗೊತ್ತಾಗುತ್ತದೆ. ಹಝ್ರತ್ ಪೈಗಂಬರ್(ಸ) ನಿಧನರಾದಾಗ ಖಿಲಾಫತಿಗೆ ಅರ್ಹರೆಂದು ಹಝ್ರತ್ ಅಬೂಬಕರ್(ರ) ಭಾವಿಸಿದ ಇಬ್ಬರು ಸಹಾಬಿಯರಲ್ಲಿ ಇವರು ಒಬ್ಬರಾಗಿದ್ದರು. ಅಬೂ ಉಬೈದ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಪ್ಲೇಗ್ ಬಾಧಿತನಾಗಿ ಶಹೀದ್ ಆದರು.

ಅದೇ ರೀತಿಯಲ್ಲಿ ಮತ್ತೊಂದು ಕಾರ್ಯಾಚರಣೆ ಝೈದ್ ಬಿನ್ ಹಾರಿಸ(ರ)ರ ಕಾರ್ಯಾಚರಣೆಯಾಗಿದೆ. ಅದನ್ನು ಹಿಜರೀ 6, ರಬೀಉಲ್ ಆಖಿರ್ ಮಾಸದಲ್ಲಿ ಬನೂ ಸಲೀಂ ಗೋತ್ರದ ಕಡೆಗೆ ಕಳುಹಿಸಲಾಯಿತು. ಮತ್ತೊಂದು ಕಾರ್ಯಾಚರಣೆ ಅವರದೇ ನೇತೃತ್ವದಲ್ಲಿ ನೂರ ಎಪ್ಪತ್ತು ಸಹಾಬಿಯರ ಜೊತೆಗೆ ಹಿಜರಿ 6 ಜಮಾದಿಲ್ ಊಲಾ ತಿಂಗಳಲ್ಲಿ ಐಸ್ ಗೋತ್ರದ ಕಡೆಗೆ ರವಾನಿಸಲಾಗಿತ್ತು.

ಈ ಘಟನೆಗಳ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಅಳಿಯ ಅಬುಲ್‌ಆಸ್ ಬಿನ್ ರಬೀಅ್‌ರ ಬಂಧನ ಮತ್ತು ಇಸ್ಲಾಂ ಸ್ವೀಕಾರದ ಪ್ರಸ್ತಾಪವಿದೆ. ತನ್ನ ವ್ಯಾಪಾರದ ಸಂಪತ್ತು ಮುಸ್ಲಿಮರ ವಶಕ್ಕೆ ಹೋದಾಗ ಅವರು ಮದೀನಕ್ಕೆ ಹೋದರು ಮತ್ತು ಹಝ್ರತ್ ಪೈಗಂಬರ್(ಸ)ರ ಪುತ್ರಿಯಾದ ಝೈನಬ್(ರ)ರೊಡನೆ ಅಭಯ ಯಾಚಿಸಿದರು. ಹಝ್ರತ್ ಝೈನಬ್(ರ) ಅವರಿಗೆ ಅಭಯ ನೀಡಿದರು. ಹಝ್ರತ್ ಪೈಗಂಬರ್(ಸ)ರಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಜನರೊಡನೆ ಹೀಗೆ ಹೇಳಿದರು: ನನಗೂ ಇದರ ಬಗ್ಗೆ ಈಗ ತಾನೆ ಗೊತ್ತಾಯಿತು. ಮೊದಲು ನನಗೆ ಇದರ ಬಗ್ಗೆ ಗೊತ್ತಿರಲಿಲ್ಲ ಎಂದು ಹೇಳಿದರು. ನಂತರ ಹಝ್ರತ್ ಝೈನಬ್(ರ)ರ ವಿನಂತಿ ಪ್ರಕಾರ ಹಝ್ರತ್ ಪೈಗಂಬರ್(ಸ) ಅಬುಲ್ ಆಸ್‌ರ ಸಂಪತ್ತನ್ನು ಮರಳಿಸಲು ಶಿಫಾರಸ್ಸು ಮಾಡಿದರು. ಆಗ ಅಬುಲ್ ಆಸ್‌ರ ಜೊತೆಗೆ ಇತರ ಎಲ್ಲರ ಸಂಪತ್ತುಗಳನ್ನು ಕೂಡ ಮರಳಿಸಲಾಯಿತು, ಅಬುಲ್‌ಆಸ್ ಮಕ್ಕಕ್ಕೆ ಮರಳಿ ಹೋದರು. ಅವರು ಜನರಿಗೆ ಅವರ ಸಂಪತ್ತನ್ನು ಮರಳಿಸಿದ ನಂತರ ತಾನು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದಾಗಿ ಮಕ್ಕಾ ನಿವಾಸಿಗಳ ಮುಂದೆ ಘೋಷಿಸಿದರು. ಇಸ್ಲಾಂ ಸ್ವೀಕಾರದ ಘೋಷಣೆಯ ನಂತರ ಅಬುಲ್‌ಆಸ್(ರ) ಮದೀನಕ್ಕೆ ಹೋದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಝೈನಬ್(ರ)ರನ್ನು ಹೊಸದಾಗಿ ಯಾವುದೇ ನಿಕಾಹ್ ನಡೆಸದೆ ಅವರಿಗೆ ಮರಳಿಸಿದರು. ಹಝ್ರತ್ ಅಬುಲ್‌ಆಸ್(ರ)ರ ವ್ಯಾಪಾರ ಮಕ್ಕದಲ್ಲಿ ಆಗಿತ್ತು. ಆದ್ದರಿಂದ ಅವರು ಮದೀನದಲ್ಲಿ ಹೆಚ್ಚು ತಂಗಲಿಲ್ಲ ಮಕ್ಕಕ್ಕೆ ಮರಳಿದರು. ಹಿಜರೀ 12ರಲ್ಲಿ ಅಬುಲ್‌ಆಸ್ ನಿಧನಗೊಂಡರು.

ಮತ್ತೊಂದು ಯುದ್ಧವಾದ ಬನೂ ಲಹ್‌ಯಾನ್ ಹಿಜರೀ 6, ಜಮಾದಿಯುಲ್ ಊಲಾ ತಿಂಗಳಲ್ಲಿ ನಡೆದಿತ್ತು. ಈ ಯುದ್ಧದ ಹಿನ್ನೆಲೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರಜೀಅ್‌ನ ಘಟನೆಯ ಬಗ್ಗೆ ಪ್ರಸ್ತಾಪಿಸಿರುವರು. ಅಂದು ಹತ್ತು ಮುಗ್ಧ ಮುಸ್ಲಿಮರನ್ನು ಕ್ರೂರವಾಗಿ ಶಹೀದ್ ಮಾಡಲಾಗಿತ್ತು. ಬನೂ ಲಹ್‌ಯಾನ್ ಗೋತ್ರ ಆಗಲೂ ಮುಸ್ಲಿಮರ ವಿರುದ್ಧ ಕುತಂತ್ರಗಳನ್ನು ಮಾಡುತ್ತಿದ್ದರು. ಆದ್ದರಿಂದ ಅವರನ್ನು ಹೇಗಾದರೂ ದಂಡಿಸಬೇಕು ಎಂದು ಹಝ್ರತ್ ಪೈಗಂಬರ್(ಸ) ಯೋಚಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ) ಇನ್ನೂರು ಸಹಾಬಿಯರು ಮತ್ತು ಇಪ್ಪತ್ತು ಕುದುರೆಗಳ ಜೊತೆಗೆ ಅವರ ಕಡೆಗೆ ಹೊರಟರು. ಅವರಿಗೆ ಗೊತ್ತಾಗದಂತೆ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ತಲಪಿದರು. ಆದರೆ ಬನೂಲಹ್‌ಯಾನ್ ಗೋತ್ರಕ್ಕೆ ಹಝ್ರತ್ ಪೈಗಂಬರ್(ಸ)ರ ಆಗಮನದ ಸುದ್ದಿ ಮುಟ್ಟಿತ್ತು. ಅವರು ಪರ್ವತಗಳ ಶಿಖರಗಳಿಗೆ ಹೋಗಿ ಅವಿತುಕೊಂಡರು. ಅವರಲ್ಲಿ ಯಾರನ್ನೂ ಹಿಡಿಯಲಾಗಲಿಲ್ಲ. ಹಝ್ರತ್ ಪೈಗಂಬರ್(ಸ) ಅಲ್ಲಿ ಒಂದೆರಡು ದಿನಗಳು ತಂಗಿದರು. ಅನೇಕ ಸಂಘಗಳನ್ನು ಆಸುಪಾಸಿನ ಪ್ರದೇಶಗಳಿಗೆ ಕಳುಹಿಸಿದರು. ಆದರೆ ಅವರನ್ನು ಹಿಡಿಯಲಾಗಲಿಲ್ಲ. ಈ ಯಾತ್ರೆಯಲ್ಲಿ ಸಹಾಬಿಯರು ಶಹೀದ್ ಆಗಿದ್ದ ಸ್ಥಳಕ್ಕೆ ತಲುಪಿದಾಗ ಹಝ್ರತ್ ಪೈಗಂಬರ್(ಸ) ಬಹಳ ದುಃಖಿತರಾದರು. ಹಝ್ರತ್ ಪೈಗಂಬರ್(ಸ) ಅತ್ಯಂತ ನೋವಿನಿಂದ ಆ ಶಹೀದ್‌ರಿಗಾಗಿ ದುಆ ಮಾಡಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಈ ಯಾತ್ರೆಯಿಂದ ಮರಳುವಾಗ ಹಝ್ರತ್ ಪೈಗಂಬರ್(ಸ) ಒಂದು ಪ್ರಾರ್ಥನೆಯನ್ನು ಮಾಡಿದ್ದರು. ಅದನ್ನು ಅನಂತರ ಮುಸ್ಲಿಮರು ಸಾಮಾನ್ಯವಾಗಿ ತಮ್ಮ ಪ್ರಧಾನ ಯಾತ್ರೆಗಳಿಂದ ಮರಳುವಾಗ ಮಾಡುತ್ತಾರೆ: ಆ ದುಆ ಇದಾಗಿದೆ: **ಆಯಿಬೂನ ತಾಯಿಬೂನ ಆಬಿದೂನ ಸಾಜಿದೂನ ಲಿರಬ್ಬಿನಾ ಹಾಮಿದೂನ್**. ಅರ್ಥ: "ನಾವು ನಮ್ಮ ಅಲ್ಲಾಹನೆಡೆಗೆ ಮರಳುವವರಾಗಿದ್ದೇವೆ. ಅವನೆಡೆಗೆ ಬಾಗುವವರಾಗಿದ್ದೇವೆ. ಅವನನ್ನು ಆರಾಧಿಸುವವರಾಗಿದ್ದೇವೆ. ಅವನ ಮುಂದೆ ಸಾಷ್ಟಾಂಗ ಮಾಡುವವರಾಗಿದ್ದೇವೆ. ನಮ್ಮ ಪ್ರಭುವಿನ ಸ್ತುತಿಗಾನ ಮಾಡುವವರಾಗಿದ್ದೇವೆ." ಹಝ್ರತ್ ಪೈಗಂಬರ್(ಸ) ಅದರ ನಂತರದ ಯಾತ್ರೆಗಳಲ್ಲೂ ಸಾಮಾನ್ಯವಾಗಿ ಈ ಪ್ರಾರ್ಥನೆಯನ್ನು ಮಾಡುತ್ತಿದ್ದರು. ಅದರ ಜೊತೆಗೆ ಕೆಲವೊಮ್ಮೆ **ಸದಖಲ್ಲಾಹು ವಅ್‌ದಹೂ ವನಸರ ಅಬ್‌ದಹೂ ವ ಹಝ್ಮಲ್ ಅಹ್‌ಝಾಬ ವಹ್‌ದಹೂ** ಎಂಬೀ ಸಾಲುಗಳನ್ನು ಕೂಡ ಸೇರಿಸುತ್ತಿದ್ದರು. ಅರ್ಥ: "ನಮ್ಮ ಪ್ರಭು ತನ್ನ ವಾಗ್ದಾನವನ್ನು ಈಡೇರಿಸಿದನು ಮತ್ತು ತನ್ನ ದಾಸನ ಸಹಾಯವನ್ನು ಮಾಡಿದನು ಮತ್ತು ಶತ್ರುಗಳ ಸೇನೆಯನ್ನು ತನ್ನ ಶಕ್ತಿಯಿಂದ ದಮನಿಸಿದನು."

ಈ ದುಆ ಒಂದು ವಿಶೇಷವಾದ ಅವಸ್ಥೆಯನ್ನು ಒಳಗೊಂಡಿದೆ. ಆ ಕಷ್ಟದ ಕಾಲದಲ್ಲಿ ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಹೃದಯದಲ್ಲಿ ಇದ್ದ ಭಾವನೆಗಳ ಬಗ್ಗೆ ಈ ದುಆದಿಂದ ಅರಿಯಲು ಸಾಧ್ಯವಾಗುತ್ತದೆ. ಆ ಭಾವನೆಗಳನ್ನು ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರಲ್ಲಿ ಉಂಟುಮಾಡಲು ಬಯಸುತ್ತಿದ್ದರು.

ಮುಸ್ಲಿಮರ ಆರಾಧನೆ ಮತ್ತು ಇಸ್ಲಾಮಿನ ಶಾಂತಿಪೂರ್ಣ ಪ್ರಚಾರದ ಮಾರ್ಗದಲ್ಲಿ ಉಂಟುಮಾಡಲಾಗುತ್ತಿದ್ದ ತಡೆಯನ್ನು ಅಲ್ಲಾಹನು ದೂರ ಮಾಡಲಿ ಎಂಬ ಕಳವಳ ಈ ದುಆದಲ್ಲಿ ಅಡಗಿದೆ.

ಮತ್ತೊಂದು ರ್ಝೈದ್ ಬಿನ್ ಹಾರಿಸರ ಕಾರ್ಯಾಚರಣೆಯಾಗಿದೆ. ಅದು ಹಿಜರೀ 6, ಜಮಾದಿಯುಲ್ ಆಖ಼ಿರ್ ತಿಂಗಳಲ್ಲಿ ನಡೆದಿತ್ತು. ಈ ಕಾರ್ಯಾಚರಣೆಯಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ರ್ಝೈದ್ ಬಿನ್ ಹಾರಿಸ(ರ)ರನ್ನು ಹದಿನೈದು ವ್ಯಕ್ತಿಗಳ ಜೊತೆಗೆ ಬನೂ ಸಅ್‌ಲಬ ಬಿನ್ ಸಅದ್ ಗೋತ್ರದ ಬಳಿಗೆ ಕಳುಹಿಸಿದರು. ಈ ಕಾರ್ಯಾಚರಣೆಯಲ್ಲಿ ಯುದ್ಧದ ಸ್ಥಿತಿ ಉಂಟಾಗಲಿಲ್ಲ.

ಈ ವಿಷಯ ಮುಂದುವರೆಯುವುದೆಂದು ತಿಳಿಸಿದ ನಂತರ ಹುಝೂರ್, ವೇಗವಾಗಿ ಬದಲಾಗುತ್ತಿರುವ ಲೋಕದ ಸ್ಥಿತಿಗತಿಗಳ ಕುರಿತು ಹೀಗೆ ಹೇಳಿದರು: ಲೋಕದ ಅವಸ್ಥೆಗಳ ಬಗ್ಗೆ ಎಲ್ಲರಿಗೂ ಗೊತ್ತಿದೆ. ಸಿರಿಯಾದಲ್ಲಿ ಉಂಟಾಗುತ್ತಿರುವ ಸ್ಥಿತಿಗಳ ಕುರಿತು ಈಗ ಸ್ಪಷ್ಟವಾಗಿ ಹೇಳುವಂತಿಲ್ಲ. ಒಂದು ಕ್ರೂರ ನಿರಂಕುಶ ಸರ್ಕಾರ ಕೊನೆಗೊಂಡಿದೆ ಎಂದು ಬಾಹ್ಯವಾಗಿ ತೋರುತ್ತಿದೆಯಾದರೂ ಬರಲಿರುವ ಸರ್ಕಾರ ನ್ಯಾಯಪಾಲನೆ ಮಾಡುವದ್ದು ಆಗಿರಲಿ ಎಂದು ದುಆ ಮಾಡಬೇಕು. ಈ ಪ್ರದೇಶದ ಅಹ್ಮದಿಯರನ್ನು ಅಲ್ಲಾಹನು ಸಂರಕ್ಷಿಸಲಿ. ದೌರ್ಜನ್ಯ ಕೊನೆಗೊಂಡದ್ದಕ್ಕಾಗಿ ಜನಸಾಮಾನ್ಯರು ಸಂತೋಷಪಡುತ್ತಿದ್ದಾರೆ. ಆದರೆ ಇನ್ನೇನು ಆಗುವುದು ಎಂದು ಗೊತ್ತಾಗುತ್ತಿಲ್ಲವೆಂದು ವಿಶ್ಲೇಷಕರು ಬರೆಯುತ್ತಿದ್ದಾರೆ. ಇಸ್ರೇಲ್ ಕೂಡ ಈ ಪ್ರದೇಶದ ಮೇಲೆ ವಿನಾ ಕಾರಣ ದಾಳಿ ನಡೆಸುತ್ತಿದೆ. ಇಸ್ಲಾಮಿಕ ಲೋಕದ ವಿರುದ್ಧ ಅವರ ಉದ್ದೇಶಗಳು ಅಪಾಯಕಾರಿಯಾಗಿವೆ ಎಂದು ಬಾಹ್ಯನೋಟದಿಂದಲೇ ಅನಿಸುತ್ತಿದೆ. ಈ ಸಂಬಂಧವಾಗಿ ಪಾಕಿಸ್ತಾನಕ್ಕಾಗಿಯೂ ಬಹಳಷ್ಟು ದುಆ ಮಾಡಿರಿ. ಇರಾನ್ ಮತ್ತು ಇತರ ದೇಶಗಳಿಗಾಗಿಯೂ. ಅಲ್ಲಾಹನು ಮುಸ್ಲಿಮರಿಗೂ ಬುದ್ಧಿ ನೀಡಲಿ. ಅಲ್ಲಾಹನು ಎಲ್ಲ ಅಹ್ಮದಿಯರನ್ನು ಸಂರಕ್ಷಿಸಲಿ. ಅಹ್ಮದಿಯರು ಮುಸ್ಲಿಮರ ಬಳಿಯಲ್ಲೂ ಸುರಕ್ಷಿತರಲ್ಲ, ಮುಸ್ಲಿಮರ ವಿರೋಧಿಗಳಾದ ಈ ಅನ್ಯರ ಬಳಿಯಲ್ಲೂ ಸುರಕ್ಷಿತರಲ್ಲ. ಇತ್ತೀಚೆಗೆ ಲೋಕದಲ್ಲಿ ಅನೇಕ ಕಡೆಗಳಲ್ಲಿ ಬಿರುಗಾಳಿ ಸಹ ಬೀಸುತ್ತಿದೆ. ಅಲ್ಲಾಹನು ಲೋಕವನ್ನು ಆಕಾಶೀಯ ಆಪತ್ತುಗಳಿಂದಲೂ ಸುರಕ್ಷಿತವಾಗಿರಿಸಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು. ನುಸ್ರತಾಬಾದ್ ಮೀರ್‌ಪುರ್ ಖಾಸ್‌ನ ದರ್ ಮುಹಮ್ಮದ್ ಸಾಹಿಬ್‌ರ ಪುತ್ರರಾದ ಸನ್ಮಾನ್ಯ ಅಮೀರ್ ಹಸನ್ ಮರಾಂಡಿ ಸಾಹಿಬ್‌ರನ್ನು ಡಿಸೆಂಬರ್ 13ರಂದು ಬೆಳಿಗ್ಗೆ ಫೈರಿಂಗ್ ಮಾಡಿ ಶಹೀದ್ ಮಾಡಲಾಗಿತ್ತು. ಅದೇ ರೀತಿಯಲ್ಲಿ ಮಲೇಶಿಯಾದ ಮುಬಲ್ಲಿಗ್ ಆಗಿದ್ದ ಸನ್ಮಾನ್ಯ ಮೌಲಾನಾ ಅಬ್ದುಸ್ಸತ್ತಾರ್ ರೌಫ್ ಸಾಹಿಬ್‌ರ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು ಮತ್ತು ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿ ತಿಳಿಸಿದರು. ದಿವಂಗತರ ಮಗ್ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.

*****

اَلْحَمْدُ لِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak'***, *Islamabad*, *Tilford*, U.K. On 20-12-2024
**Summarized by** *Majlis Ansarullah Bharat*
***Kannada Translation***: Moulavi Inamullah for Kannada Desk, Qadian
***Reviewed by***: M.P Ibrahim | ***Layout***: Basheer K.P. Manjeshwar
***Published By***: Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon